## ದೇವಿ ಮೇಲೆ ಅಪಾರ ಭಕ್ತಿ

ಇಳಯರಾಜ ಅವರು ದೇವಿ ಭಕ್ತ. ಕೊಲ್ಲೂರು ಮೂಕಾಂಬಿಕಾ ದೇವಿಯ ಮೇಲೆ ಅಪಾರ ನಂಬಿಕೆ, ಅಪರಿಮಿತ ಪ್ರೀತಿ ಇಟ್ಟುಕೊಂಡವರು. ಅದು 1974ನೇ ಇಸವಿ. ಇಳಯರಾಜ ಅವರು ಜಿ.ಕೆ. ವೆಂಕಟೇಶ್ ಅವರ ಜೊತೆ ಸಂಗೀತ ಕಾರ್ಯಕ್ರಮಕ್ಕೆಂದು ಮೈಸೂರಿಗೆ ಹೋಗಿದ್ದರು. ಜಿ.ಕೆ. ವೆಂಕಟೇಶ್ ಅವರ ಕಛೇರಿಗೆ ಇಳಯರಾಜ ಹಾಗೂ ಎಲ್. ವೈದ್ಯನಾಥನ್ ಸಹಕಾರ ನೀಡಿದ್ದರು. ಕಾರ್ಯಕ್ರಮ ಮುಗಿದ ಬಳಿಕ ಹೋಟೆಲ್ ರೂಮಿಗೆ ತೆರಳಿದಾಗ ಇಳಯರಾಜ ಅವರಿಗೆ ವಿಪರೀತ ಜ್ವರ ಬಂತು. ಇದಕ್ಕೂ ಮೊದಲು ಅವರು ಕೊಲ್ಲೂರಿಗೆ ಹೋಗುವ ಪ್ಲಾನ್ ಮಾಡಿದ್ದರು. ಜ್ವರ ಬಂದ ಹಿನ್ನೆಲೆಯಲ್ಲಿ ತೀವ್ರ ನಿಶ್ಶಕ್ತಿಯೂ ಉಂಟಾಯಿತು. ಅದುವರೆಗೂ ಅವರ ಜೀವನದಲ್ಲಿ ಇಂಥ ಜ್ವರ ಕಂಡಿರಲಿಲ್ಲ. ತಮ್ಮ ಜೀವನವೇ ಮುಗಿಯಿತು ಎನಿಸಿತ್ತು. ಅಲ್ಲದೆ ತಮ್ಮ ತಾಯಿ, ಪತ್ನಿ, ಮಕ್ಕಳ ಬಗ್ಗೆಯೂ ಯೋಚನೆ ಬಂದುಹೋಯಿತು. ಈ ಪರಿಸ್ಥಿತಿಯಲ್ಲಿ ವೈದ್ಯನಾಥನ್ ಅವರು ಇಳಯರಾಜ ಅವರ ರೂಮಿಗೆ ಬಂದು, 'ನೀನು ಮೂಕಾಂಬಿಕಾ ದೇವಸ್ಥಾನಕ್ಕೆ ಹೋಗಬೇಕು ಅಂತಿಯಾ, ಇಷ್ಟೊಂದು ಜ್ವರವಿದೆ, ವಾಪಸ್ ಚೆನ್ನೈಗೇ ಹೋಗೋಣವಾ' ಎಂದರು. ಆಗ ಇಳಯರಾಜ ಅವರು, 'ಎಂಥದ್ದೇ ಪರಿಸ್ಥಿತಿ ಬಂದರೂ ನಾನು ಮೂಕಾಂಬಿಕಾ ದೇವಸ್ಥಾನಕ್ಕೆ ಹೋಗಿಯೇ ಹೋಗುತ್ತೇನೆ' ಎಂದರು. ಹೀಗೆ ಹೇಳಿದ ಕೆಲವೇ ಹೊತ್ತಿನಲ್ಲಿ ಅವರ ಜ್ವರ ಪೂರ್ತಿ ಕಡಿಮೆಯಾಗಿ ಬಿಟ್ಟಿತ್ತು.

ಮರುದಿನವೇ ಕೊಲ್ಲೂರಿಗೆ ತೆರಳಿದರು. ಹೋಗಿ ದೇವಸ್ಥಾನಕ್ಕೆ ಕಾಲಿಟ್ಟ ಕೂಡಲೇ ಇಳಯರಾಜ ಅವರ ಹೃದಯ ಕಂಪಿಸಿತು. ದೇವಸ್ಥಾನಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಿದಾಗ ದೇವಿ ಮೂಕಾಂಬಿಕೆಯ ಅನುಗ್ರಹ ಇವರಿಗೆ ಪ್ರಾಪ್ತವಾಯಿತು. ಇದೇ ಸಮಯದಲ್ಲಿ ದೇಗುಲದಲ್ಲಿ ವೈದ್ಯನಾಥನ್ ಅವರು ಪಿಟೀಲು ನುಡಿಸಿದರು. ಆಗ ಇಳಯರಾಜ ಅವರು 'ನಾನು ಮತ್ತೆ ನಿನ್ನನ್ನು ನೋಡಲು ಬಂದರೆ ದಯವಿಟ್ಟು ನನಗೆ ಎರಡು ಕೀರ್ತನೆಗಳನ್ನು ಹಾಡಲು ಅನುಗ್ರಹಿಸು' ಎಂದು ಪ್ರಾರ್ಥಿಸಿದರು. 'ನನಗೆ ಜ್ವರ ಬಂದಿದ್ದು, ದೇವಿಯನ್ನು ನೆನೆದಿದ್ದು, ಅಲ್ಲಿಗೆ ಹೋದದ್ದು, ದೇವಿ ಅನುಗ್ರಹಿಸಿದ್ದು ಎಲ್ಲವೂ ಪವಾಡವೇ' ಎಂದು ಇಳಯರಾಜ ಅವರು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.



ಶಿಖರಕ್ಕೇರಿದ ಅಸಾಧಾರಣ ಸಾಧಕ. ಸಾವಿರಾರು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ ಇವರ ಹತ್ತು ಸಾವಿರಕ್ಕೂ ಹೆಚ್ಚು ಹಾಡುಗಳು 'ಸಂಗೀತ ಮುತ್ತು'ಗಳಾಗಿ ವಿಜೃಂಭಿಸುತ್ತಿವೆ. ಇವರಿಗೆ ರಾಷ್ಟ್ರ ಪ್ರಶಸ್ತಿ ತಂದುಕೊಟ್ಟ 'ಸಾಗರ ಸಂಗಮಂ' (ತೆಲುಗು), 'ಸಿಂಧು ಭೈರವಿ' (ತಮಿಳು), 'ರುದ್ರವೀಣ' (ತೆಲುಗು), 'ಪಜಾಸ್ಸಿ ರಾಜ' (ಮಲಯಾಳಂ) ಚಿತ್ರಗಳು 'ಎವರ್‌ಗ್ರೀನ್' ಹಾಡುಗಳಾಗಿ ಮಿಂಚುತ್ತಿವೆ.



**ಭಲೇ ಜೋಡಿ:** ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಗೂ ಇಳಯರಾಜ

ಅಂದ ಹಾಗೆ, ಇಳಯರಾಜ ಅವರ ಸಂಗೀತ ಪಯಣಕ್ಕೆ ಐವತ್ತು ತುಂಬಿದೆ. ಸುವರ್ಣ ಮಹೋತ್ಸವದ ಸಂಭ್ರಮದಲ್ಲಿ ಇಳಯರಾಜ ಅವರು ತಮ್ಮ ಪಾದರಸದಂಥ ವ್ಯಕ್ತಿತ್ವದಿಂದ ಮಿಂಚುತ್ತಿದ್ದಾರೆ. 82ರ ಈ ಹರೆಯದಲ್ಲೂ 28ರ ಯುವಕರನ್ನೂ ನಾಚಿಸುವಂಥ ಸೃಜನಶೀಲತೆ ಅವರಲ್ಲಿರುವುದು ಚಿತ್ರರಸಿಕರ ಸೌಭಾಗ್ಯ ಎನ್ನಬಹುದು.

### ಕನ್ನಡದ ಕಂಪು; ಇಳಯರಾಜ ಮೆಲುಕು

ಚೆನ್ನೈಯಲ್ಲಿರುವ ಈ 'ಸಂಗೀತ ಸಾಮ್ರಾಟ' ಕಳೆದ ತಿಂಗಳು ಇಸ್ಕಾನ್ ದೇವಾಲಯದ ಆಡಳಿತ ಮಂಡಳಿ ಆಯೋಜಿಸಿದ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕಾಗಿ ಬೆಂಗಳೂರಿಗೆ ಬಂದಿದ್ದರು.

'ತಮಿಳುನಾಡಿನಲ್ಲಿ ಹುಟ್ಟಿದ್ದಾದರೂ ನಾನು ಸಂಗೀತ ವೃತ್ತಿ ಆರಂಭಿಸಿದ್ದೇ ಕನ್ನಡದಲ್ಲಿ. ಸಂಗೀತ ಸಂಯೋಜಕನಾಗುವ ಮೊದಲು 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಜಿ.ಕೆ. ವೆಂಕಟೇಶ್ ಅವರಿಗೆ ಸಹಾಯಕನಾಗಿ ಕೆಲಸ ಮಾಡಿದೆ' ಎನ್ನುತ್ತಾ ತಮ್ಮ ಸಿನಿಸಂಗೀತ ಪಯಣದ ಮೊದಲ ಹೆಜ್ಜೆಯನ್ನು ಮೆಲುಕು ಹಾಕುತ್ತಾರೆ.

''ತಮಿಳು ಸಿನಿಮಾದ ಮೇರುನಟ ರಜನೀಕಾಂತ್ ಅವರು ನನ್ನನ್ನು 'ರಾಗ ಸರಸ್ವತಿ, ರಾಗದೇವತೆ' ಎಂದು ಕೊಂಡಾಡಿದ್ದು ನನ್ನ ಜೀವನದ ಅವಿಸ್ಮರಣೀಯ ಕ್ಷಣ'' ಎಂದು ಪುಳಕಗೊಳ್ಳುತ್ತಾರೆ ಈ ಗಾನ ದಿಗ್ಗಜ!

'ಚಲನಚಿತ್ರ ಸಂಗೀತದಲ್ಲಿ ಐವತ್ತು ವರ್ಷಗಳ ಸುದೀರ್ಘ ಪಯಣ ನಡೆಸಿದೆ. ಅಂದಿನ ದಿನಗಳಿಗೂ ಇಂದಿಗೂ ಬಹಳ ವ್ಯತ್ಯಾಸವಾಗಿದೆ. ತಂತ್ರಜ್ಞಾನ ಕ್ಷೇತ್ರ ಅಭೂತಪೂರ್ವವಾಗಿ ಬದಲಾವಣೆಯಾಗಿದೆ. ಸಂಗೀತ ಕ್ಷೇತ್ರವೂ ಅಷ್ಟೇ. ಮನಸ್ಸಿಗೆ ನೆಮ್ಮದಿ ನೀಡಲು ಸಂಗೀತ ಕೇಳಬೇಕು' ಎನ್ನುವ ಅವರು, ಧ್ಯಾನದ ಬಗ್ಗೆಯೂ ಮಾತನಾಡಿದರು. 'ಧ್ಯಾನ ಎಂದರೆ ಅದಕ್ಕೆ ಯಾವುದೇ ಉದ್ದೇಶ ಇರಬಾರದು. ಧ್ಯಾನ ಮಾಡದೇ ನಾವು ಶಾಂತಿಯಿಂದ ಇರಲು ಸಾಧ್ಯವಾದರೆ ಅದೇ ಧ್ಯಾನ ಎಂಬುದು ನನ್ನದೇ



ವ್ಯಾಖ್ಯಾನ' ಎನ್ನುವುದು ಇಳಯರಾಜ ಅಭಿಪ್ರಾಯ.

'ಕೃತಕ ಬುದ್ಧಿಮತ್ತೆ ಸಂಗೀತ ಕ್ಷೇತ್ರವನ್ನೂ ಆವರಿಸಿದೆ. ಬುದ್ಧಿಶಕ್ತಿ ತಕ್ಷಣ ತಲೆಗೆ ಹೋಗುತ್ತದೆ. ಆದರೆ ಸಂಗೀತ ತಕ್ಷಣ ಹೃದಯ ಮತ್ತು ಆತ್ಮಕ್ಕೆ ಹೋಗುತ್ತದೆ. ಹಾಗೆ ನೋಡಿದರೆ ಮಾನವ ಬುದ್ಧಿಮತ್ತೆ ಸ್ವತಃ ಕೃತಕವಾಗಿದೆ. ಸಂಗೀತವು ಬೇರೆಡೆಯಿಂದ ಬರುತ್ತದೆ, ಅದು ಕಾಲಾನಂತರದಲ್ಲಿ ಎಲ್ಲೆಡೆ ಆವರಿಸಿಕೊಂಡು ದೈವಿಕವಾಗುತ್ತದೆ' ಎನ್ನುತ್ತಾರೆ ಅವರು.

'ಸಂಗೀತಕ್ಕೆ ಭಾಷೆ, ಗಡಿ, ಪ್ರಾಂತ್ಯ ಎಂಬ ಎಲ್ಲೆ ಇಲ್ಲ. ಬೆಂಗಳೂರಿನ ಪ್ರೇಕ್ಷಕರೂ ಒಂದೇ, ಚೆನ್ನೈಯವರೂ ಒಂದೇ. ಆಕಾಶ ಹೇಗೆ ಎಲ್ಲೆಡೆ ಒಂದೆಯೋ ಹಾಗೇ ಸಂಗೀತಾಭಿಮಾನಿಗಳೂ. ಆದರೆ ಅಂದಿನ ಬೆಂಗಳೂರೇ ಬೇರೆ, ಈಗ ಅಭಿವೃದ್ಧಿ ಹೊಂದಿದ ಬೆಂಗಳೂರೇ ಬೇರೆ' ಎಂಬುದು ಅವರ ಅಭಿಮತ.

ಸಿನಿಮಾ ಸಂಗೀತದಲ್ಲಿ ಎತ್ತರೆತ್ತರ ಬೆಳೆದ ಈ ಮಹಾನ್ ಸಾಧಕ ಇನ್ನಷ್ಟು ಬೆಳಗಲಿ. ಚಿತ್ರ ಸಂಗೀತ ರಸಿಕರ ಮನದಲ್ಲಿ ಅಚ್ಚಳಿಯದೇ ಉಳಿದ ಈ ಸಂಗೀತ ಮಾಂತ್ರಿಕ ನೂರ್ಕಾಲ ಬಾಳಲಿ, ಇವರ ಸಂಗೀತವೂ ಎಂದೆಂದೂ ಮನೆಮನ ಬೆಳಗಲಿ.